ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ವಿಟಿಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ

**Visvesvaraya Technological University**
(State University of Government of Karnataka Established as per the VTU Act, 1994)
"Jnana Sangama" Belagavi-590018, Karnataka, India

ಪ್ರೊ. ಬಿ.ಇ. ರಂಗಸ್ವಾಮಿ, ಪಿ.ಹೆಚ್.ಡಿ.
ಕುಲಸಚಿವರು

ದೂರವಾಣಿ ಸಂಖೆ : (0831) – 2498100
ಫ್ಯಾಕ್ಸ್ ಸಂಖ್ಯೆ : (0831) – 2405467

Examination
VS 19/4/23

ಸಂಖ್ಯೆ: ವಿತಾವಿ/ಕುಸಕಾ/2023-24/465

ದಿನಾಂಕ: 18 APR 2023

18.4.23

## ಸುತ್ತೋಲೆ

ವಿಷಯ: ವಿಶ್ವವಿದ್ಯಾಲಯದ ಮೊದಲನೇ ವರ್ಷದ ಪರೀಕ್ಷೆಗಳನ್ನು ಮುಂದೂಡುವ ಕುರಿತು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 18-4-2023

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ ಈ ಮೂಲಕ ತಿಳಿಸುವುದೇನೆಂದರೆ, ವಿಶ್ವವಿದ್ಯಾಲಯದ ಶೈಕ್ಷಣಿಕ ವರ್ಷ 2022-23 ನೇ ಸಾಲಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಅನುಮೋದನೆ ಸಂಬಂಧವಾಗಿ ದಾಖಲೆಗಳ ಪರೀಶೀಲನಾ ಪ್ರಕ್ರಿಯುಯು ಈ ವಾರ ಮುಗಿಯುವ ಹಂತದಲ್ಲಿರುತ್ತದೆ. ಮುಂದುವರೆದು, ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಅನೇಕ ಸರ್ಕಾರಿ ಹಾಗೂ ಅನುದಾನಿತ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಕರ್ನಾಟಕ ವಿಧಾನಸಭೆ ಚುನಾವಣೆ-2023 ನಿಮಿತ್ತ ಚುನಾವಣಾ ಆಯೋಗದಿಂದ ಈ ವಾರ ನಡೆಯುವ ತರಬೇತಿಗೆ ನಿಯೋಜನೆಗೊಂಡಿರುತ್ತಾರೆ. ಆ ಕಾರಣ, ದಿನಾಂಕ 20-4-2023 ರಿಂದ ವಿಶ್ವವಿದ್ಯಾಲಯದಿಂದ ನಡೆಸಲಾಗುತ್ತಿರುವ ಮೊದಲನೇ ವರ್ಷದ ಪರೀಕ್ಷೆಗಳನ್ನು ದಿನಾಂಕ 27-4-2023 ರಿಂದ ನಡೆಸಲು ತೀರ್ಮಾನಿಸಿ ಮುಂದೂಡಲಾಗಿದೆ.

*ಸೂಚನೆ: ಚುನಾವಣಾ ಆಯೋಗದಿಂದ ಈ ವಾರ ನಡೆಯುವ ತರಬೇತಿಗೆ ನಿಯೋಜನೆಗೊಂಡಿರುವ ಎಲ್ಲ ಶಿಕ್ಷಕರು ನಿಗದಿತ ಅವಧಿಯಲ್ಲಿ ತರಬೇತಿಗೆ ಹಾಜರಾಗಿ ತರಬೇತಿಯನ್ನು ಮುಗಿಸಿಕೊಳ್ಳಬೇಕು ಹಾಗೂ ತದನಂತರದಲ್ಲಿ ಯಾವುದೇ ಕಾರಣಗಳಿಂದ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಮುಂದೂಡಲಾಗುವುದಿಲ್ಲ*

ಆದೇಶದ ಮೇರೆಗೆ,

18/04/2023
ಕುಲಸಚಿವರು

ಇವರಿಗೆ,

ಪ್ರಾಂಶುಪಾಲರು, ವಿ.ತಾ.ವಿ.ಯ ಸಂಯೋಜಿತ, ಸ್ವಾಯತ್ತ, ಘಟಕ ಇಂಜನಿಯರಿಂಗ್ ಮಹಾವಿದ್ಯಾಲಯಗಳು ಹಾಗೂ ಚೇರ್‌ಪರಸನ್ಸ್, ವಿ.ತಾ.ವಿ.ಯ ಎಲ್ಲ ಸ್ನಾತಕೋತ್ತರ ಕೇಂದ್ರಗಳು

ಪ್ರತಿ ಇವರಿಗೆ:

1) ಪ್ರಾದೇಶಿಕ ನಿರ್ದೇಶಕರು (ಪ್ರಭಾರಿ), ವಿ.ತಾ.ವಿ.ಯ ಬೆಂಗಳೂರು, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ಪ್ರಾದೇಶಿಕ ಕೇಂದ್ರಗಳು
2) ಕುಲಪತಿಗಳ ಆಪ್ತಕಾರ್ಯದರ್ಶಿಗಳು

Circulate the copy to concerned students.
19/4/23